INSTAKAS

# ಭಾರತ ಬುಡಕಟ್ಟು ಉತ್ಸವ-2026



**ಇತ್ತೀಚೆಗೆ ಸುದ್ದಿಯಲ್ಲಿದೆ:**

ಇತ್ತೀಚಿಗೆ ‘ಭಾರತ ಬುಡಕಟ್ಟು ಉತ್ಸವ–2026’ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಇದು **ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ** ಪ್ರಮುಖ ಉಪಕ್ರಮವಾಗಿದ್ದು, ಇದನ್ನು **ಭಾರತೀಯ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ** (TRIFED) ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾಗುತ್ತದೆ.

**ಉದ್ದೇಶ:** 19 ದಿನಗಳ ಕಾಲ ನಡೆದ ಈ ಉತ್ಸವವು ದೇಶಾದ್ಯಂತ ಇರುವ **ಬುಡಕಟ್ಟು ಕುಶಲಕರ್ಮಿಗಳು, ಉದ್ಯಮಿಗಳು ಮತ್ತು ಸ್ವಸಹಾಯ ಸಂಘಗಳನ್ನು** (SHGs) ಒಟ್ಟುಗೂಡಿಸಿ, ಭಾರತದ ವೈವಿಧ್ಯಮಯ ಬುಡಕಟ್ಟು ಪರಂಪರೆ ಮತ್ತು ವಿಶಿಷ್ಟ ಉತ್ಪನ್ನಗಳನ್ನು ಪ್ರದರ್ಶಿಸುವ ಉದ್ದೇಶವನ್ನು ಹೊಂದಿದೆ.

## ಕರ್ನಾಟಕದ ಬುಡಕಟ್ಟು ಸಮುದಾಯಗಳ ಬಗ್ಗೆ:

ಕರ್ನಾಟಕವು ಸುಮಾರು **50 ಅಧಿಸೂಚಿತ ಪರಿಶಿಷ್ಟ ಪಂಗಡಗಳಿಗೆ** (ST) ನೆಲೆಯಾಗಿದ್ದು, ಇವರು 2011 ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 6.95% ರಷ್ಟಿದ್ದಾರೆ.

ಈ ಸಮುದಾಯಗಳು ಪ್ರಾಥಮಿಕವಾಗಿ **ಬಳ್ಳಾರಿ, ರಾಯಚೂರು, ಮೈಸೂರು, ಚಿತ್ರದುರ್ಗ ಮತ್ತು ಬೆಳಗಾವಿ** ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿವೆ.



## ಕರ್ನಾಟಕದ ಪ್ರಮುಖ ಬುಡಕಟ್ಟು ಸಮುದಾಯಗಳು



- **ನಾಯ್ಕಡ/ ನಾಯಕ /ಬೇಡರ /ಬೇಡ / ವಾಲ್ಮೀಕಿ:** ಇವರು ಕರ್ನಾಟಕದ ಅತಿದೊಡ್ಡ ಬುಡಕಟ್ಟು ಸಮುದಾಯದವರಾಗಿದ್ದು, ಐತಿಹಾಸಿಕವಾಗಿ ಇವರು ಯೋಧ ಮತ್ತು ಬೇಟೆಗಾರರಾಗಿದ್ದಾರೆ.



- **ಗೋಂಡ:** ಇವರು ರಾಜ್ಯದ ಎರಡನೇ ಅತಿದೊಡ್ಡ ಬುಡಕಟ್ಟು ಸಮುದಾಯ ದವರಾಗಿದ್ದು, ಇವರು ಪ್ರಮುಖವಾಗಿ ಬೀದರ ಮತ್ತು ಉತ್ತರ ಕನ್ನಡದಂತಹ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ.



- **ಜೇನು ಕುರುಬ:** ಇವರ ಹೆಸರೇ ಸೂಚಿಸುವಂತೆ ಇವರು "ಜೇನು ಸಂಗ್ರಹಿಸುವ ಜನ"ರಾಗಿದ್ದಾರೆ. ಪಶ್ಚಿಮ ಘಟ್ಟಗಳಲ್ಲಿ ಜೇನುತುಪ್ಪವನ್ನು ಸಂಗ್ರಹಿಸುವಲ್ಲಿ ಇವರಿಗಿರುವ ಸಾಂಪ್ರದಾಯಿಕ ಪರಿಣತಿಯನ್ನು ಇದು ಪ್ರತಿಬಿಂಬಿಸುತ್ತದೆ.



- **ಸೋಲಿಗ /ಶೋಲಗ:** ಪ್ರಾಥಮಿಕವಾಗಿ **ಬಿಳಿಗಿರಿರಂಗನ ಬೆಟ್ಟಗಳಲ್ಲಿ** ನೆಲೆಸಿರುವ ಇವರು ಅರಣ್ಯದೊಂದಿಗೆ ಆಳವಾದ ಆಧ್ಯಾತ್ಮಿಕ ಸಂಪರ್ಕವನ್ನು ಹೊಂದಿದ್ದಾರೆ. ಇವರು **‘ಸ್ಥಳಾಂತರ ಬೇಸಾಯ’** ಪದ್ಧತಿಯನ್ನು ಆಚರಿಸುವುದಕ್ಕೆ ಹೆಸರುವಾಸಿಯಾಗಿದ್ದಾರೆ.



- **ಹಕ್ಕಿಪಿಕ್ಕಿ:** ಐತಿಹಾಸಿಕವಾಗಿ ಇವರು ಅರೆ–ಅಲೆಮಾರಿ "**ಪಕ್ಷಿ ಬೇಟೆಗಾರರು**" ಆಗಿದ್ದಾರೆ (ಹಕ್ಕಿ ಎಂದರೆ ಪಕ್ಷಿ, ಪಿಕ್ಕಿ ಎಂದರೆ ಹಿಡಿಯುವುದು). ಇವರು ರಾಜಸ್ಥಾನದ ಯೋಧ ಕುಲಗಳೊಂದಿಗೆ ತಮ್ಮ ಪೂರ್ವಜರ ಸಂಪರ್ಕವನ್ನು ಹೊಂದಿದ್ದಾರೆ ಎಂದು ಪರಿಗಣಿಸಲಾಗಿದೆ.



- **ಸಿದ್ಧಿ:** ಶತಮಾನಗಳ ಹಿಂದೆ ಭಾರತಕ್ಕೆ ಬಂದ **ಆಫ್ರಿಕಾ ಮೂಲದ** ವಿಶಿಷ್ಟ ಜನಾಂಗೀಯ ಗುಂಪಾಗಿದೆ ಇವರು ಹೆಚ್ಚಾಗಿ ಉತ್ತರ ಕನ್ನಡದ ಕಾಡುಗಳಲ್ಲಿ ಕಂಡುಬರುತ್ತಾರೆ & ಇವರು "**ಕವಂದಿ**" ಎಂಬ ಕೌದಿ ಕಲೆಗೆ ಹೆಸರುವಾಸಿಯಾಗಿದ್ದಾರೆ.



- **ಕೊರಗ:** ಇವರನ್ನು **‘ವಿಶೇಷವಾಗಿ ದುರ್ಬಲವಾಗಿರುವ ಬುಡಕಟ್ಟು ಗುಂಪು’** (PVTG) ಎಂದು ಗುರುತಿಸಲಾಗಿದೆ. ಉಡುಪಿ & ದಕ್ಷಿಣ ಕನ್ನಡದಂತಹ ಕರಾವಳಿ ಜಿಲ್ಲೆಗಳಿಗೆ ಸೇರಿದವರಾಗಿದ್ದು, ಸಾಂಪ್ರದಾಯಿಕವಾಗಿ ಬುಟ್ಟಿ ಹೆಣೆಯುವವರು & ಡೋಲು ಬಾರಿಸುವವರಾಗಿದ್ದಾರೆ.



- **ಯೆರವಾ:** ಇವರು ಹೆಚ್ಚಾಗಿ ಕೊಡಗು ಮತ್ತು ಮೈಸೂರು ಭಾಗಗಳಲ್ಲಿ ಕಂಡುಬರುತ್ತಾರೆ. ಸಾಂಪ್ರದಾಯಿಕವಾಗಿ ಅರಣ್ಯವಾಸಿಗಳಾಗಿರುವ ಇವರು ಈಗ ಹೆಚ್ಚಾಗಿ **ಕಾಫಿ ಮತ್ತು ಚಹಾ ತೋಟಗಳಲ್ಲಿ** ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.